ವಿಚಾರಪ್ರಭ

# ವಿಶ್ವಧರ್ಮಗಳ ಪ್ರಕಾರ ದೇವರು, ಜೀವಿ, ಜಗತ್ತು ಮತ್ತು ಆಧ್ಯಾತ್ಮಿಕ ಸಾಧನೆ

## ಹಿಂದೂಧರ್ಮ

*ಎಮರ್ಕಳ ಕೆ. ಶಂಕರನಾರಾಯಣ ಭಟ್*

### ದೇವರು

ನಮ್ಮ ಪುಣ್ಯಭೂಮಿ ಭಾರತದಲ್ಲಿ, ಅತಿಪ್ರಾಚೀನ ವೈದಿಕ ಕಾಲದಲ್ಲಿ ತಪಸ್ಸಿದ್ಧರಾದ ಮಹರ್ಷಿಗಳ ಅಂತರಂಗದಲ್ಲಿ ಪ್ರಕಾಶ ಗೊಂಡು, ದೇಶವಿದೇಶಗಳಲ್ಲಿ ಜನಮನದಲ್ಲಿ ನೆಲೆಗೊಂಡು, ಜೀವನದಲ್ಲಿ ಹಾಸುಹೊಕ್ಕಾಗಿ ಪ್ರಚಾರಗೊಳ್ಳುತ್ತಾ ಬಂದಿರುವ ಸನಾತನ ಹಿಂದೂಧರ್ಮವು ಮಾನವನ ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಇಹಪರ ಯೋಗಕ್ಷೇಮದ ಕುರಿತಾಗಿ ನಿಖರವಾದ ನಿಲುವನ್ನು ತಳೆದಿದೆ. ಇದು ಜಗತ್ತಿನ ಧರ್ಮಗಳಲ್ಲೆಲ್ಲಾ ಅತ್ಯಂತ ಪುರಾತನವಾದುದಾಗಿದೆ. ಹಿಂದೂಧರ್ಮವು ತತ್ತ್ವಪರ ವಷ್ಟೇ ಅಲ್ಲ ಅನುಷ್ಠಾನಪರವೂ ಆಗಿದ್ದು, ಅದರಂತೆ ಹಿಂದೂ ಧರ್ಮದ ಅರಿವು ಆಚರಣೆಗಳ ಸಂಬಂಧವಾಗಿ ಅನೇಕ ಆಧಾರ ಗ್ರಂಥಗಳಿವೆ. ಅವುಗಳಲ್ಲಿ **ವೇದೋಪನಿಷತ್ತುಗಳು, ಬ್ರಹ್ಮಸೂತ್ರಗಳು** ಮತ್ತು **ಶ್ರೀಮದ್ ಭಗವದ್ಗೀತೆ** ಎಂಬ ಗ್ರಂಥತ್ರಯಗಳು ಅತ್ಯಂತ ಪ್ರಸಿದ್ಧವೂ ಸರ್ವಮಾನ್ಯವೂ ಆದ ಗ್ರಂಥಗಳಾಗಿವೆ.

ಈ ಜಗತ್ತಿನಲ್ಲಿ ಎಲ್ಲಕ್ಕೂ ಮಿಗಿಲಾಗಿ ಹಾಗೂ ಮುಖ್ಯವಾಗಿ ಪರಮಾತ್ಮ ಶಕ್ತಿಯು ಮಾನವ ಜೀವನದ ಆಧಾರವಾಗಿರುತ್ತದೆ ಎಂಬುದನ್ನು ಹಿಂದೂಧರ್ಮದಲ್ಲಿ ಸ್ಪಷ್ಟಪಡಿಸಲಾಗಿದೆ. ಪರಮಾತ್ಮನನ್ನು **ಬ್ರಹ್ಮ, ದೇವರು, ಭಗವಂತ, ಜಗದೀಶ್ವರ, ಪರಮೇಶ್ವರ** ಇತ್ಯಾದಿ ವಿವಿಧ ನಾಮಗಳಿಂದ ಬಣ್ಣಿಸಿರುವ ಹಿಂದೂ ಧರ್ಮವು ದೇವರು ಆದಿ-ಅಂತ್ಯರಹಿತನಾಗಿದ್ದು, ಸರ್ವಕಾಲಗಳಲ್ಲಿ, ಸತ್ಯನೂ ದಿವ್ಯಜ್ಞಾನಯುಕ್ತನೂ ಆನಂದಸಂಪನ್ನನೂ ಆಗಿ ಸಚ್ಚಿದಾ ನಂದ ಸ್ವರೂಪನಾಗಿದ್ದಾನೆ ಎಂಬುದಾಗಿ ಘೋಷಿಸುತ್ತದೆ. ಸಚ್ಚಿದಾ ನಂದ ಪರಮಾತ್ಮನು ಸರ್ವಶಕ್ತನೂ, ಸರ್ವಜ್ಞನೂ, ಸರ್ವ ವ್ಯಾಪಕನೂ ಸರ್ವಾಂತರ್ಯಾಮಿಯೂ ಆಗಿರುತ್ತಾನೆ. ದೇವರು ಸಕಲೇಶ್ವರನಾಗಿದ್ದು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣ ನಾಗಿದ್ದು, ಅವನ ಮಹಿಮೆಗೆ ಪ್ರಭಾವಕ್ಕೆ ಒಳಪಡದ ಯಾವುದೇ ಚರಾಚರ ವಸ್ತುವಿಚಾರಗಳು ಈ ಪ್ರಪಂಚದಲ್ಲಿಲ್ಲ. ಇದನ್ನೇ ತೈತ್ತಿರೀಯೋಪನಿಷತ್ತಿನ ಒಂದು ಮಂತ್ರದಲ್ಲಿ ಹೀಗೆ ಬಣ್ಣಿಸಲಾಗಿದೆ:

**ಯತೋ ವಾ ಇಮಾನಿ ಭೂತಾನಿ ಜಾಯಂತೇ**
**ಯೇನ ಜಾತಾನಿ ಜೀವಂತಿ, ಯತ್ ಪ್ರಯಂತ್ಯಭಿಸಂವಿಶಂತಿ**
**ತದ್ವಿಜಿಜ್ಞಾಸಸ್ವ, ತದ್ ಬ್ರಹ್ಮೇತಿ**

"ಯಾವುದರಿಂದ ಈ ಜೀವಿಗಳು ಜನಿಸುವುವೋ, ಹಾಗೆಯೇ ಹುಟ್ಟಿರುವವುಗಳು ಯಾವುದರಿಂದ ಜೀವಿಸುತ್ತವೆಯೋ ಮತ್ತು ನಾಶವಾಗುವ ಕಾಲದಲ್ಲಿ, ಯಾವುದರಲ್ಲಿ ಸೇರುವವೋ ಅದನ್ನು ಅರಿತುಕೋ. ಅದು ಬ್ರಹ್ಮ."[೧] ಹಾಗೆಯೇ ಶ್ವೇತಾಶ್ವತರೋಪ ನಿಷತ್ತಿನ ಮಂತ್ರವೊಂದರ ಮೂಲಕ ದೇವರು ಒಬ್ಬನೇ ಎಂದು ಸ್ಪಷ್ಟಪಡಿಸಲಾಗಿದ್ದು ದೇವರ ಕುರಿತಾಗಿ ಮನೋಜ್ಞವಾದ ವಿವರ ವನ್ನು ಹೀಗೆ ನೀಡಲಾಗಿದೆ:-

**ಏಕೋ ದೇವಃ ಸರ್ವಭೂತೇಷು ಗೂಢಃ**
**ಸರ್ವವ್ಯಾಪೀ ಸರ್ವಭೂತಾಂತರಾತ್ಮಾ**
**ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ**
**ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ**

"ದೇವರು ಒಬ್ಬನೇ. ಅವನು ಜಗತ್ತಿನ ಸರ್ವ ಚರಾಚರ ಪ್ರಾಣಿವಸ್ತುವಿಶೇಷಗಳಲ್ಲಿ ಗೂಢವಾಗಿರುವನು. ಸರ್ವವ್ಯಾಪಿಯೂ, ಸರ್ವ ಜೀವಿಗಳ ಅಂತರಾತ್ಮನೂ ಆಗಿ ಸಕಲ ಜೀವಿಗಳು ಮಾಡುವ ಕರ್ಮಗಳಿಗೆ ತಕ್ಕ ಫಲವನ್ನು ಕೊಡುವವನಾಗಿ, ಸರ್ವಜೀವ ಪ್ರಾಣಿಗಳಲ್ಲಿ ಸಾಕ್ಷಿಯಾಗಿ, ಚೈತನ್ಯದಾಯಕನಾಗಿ ನೆಲಸಿದ್ದರೂ ನಿರುಪಾಧಿಕನಾಗಿರುತ್ತಾನೆ."[೨]

### ಜೀವಿ

ನಾನು, ನನ್ನದು ಎಂಬ ಭಾವದಿಂದ ಕೂಡಿ ದೇಹೇಂದ್ರಿಯ ಉಪಾಧಿಗೆ ಒಳಗಾಗಿ ಜಗತ್ತಿನಲ್ಲಿ ಬಾಳುವ ಆತ್ಮಚೇತನವೇ ಜೀವಿ. ಸಂಸಾರಿ, ಕರ್ತಾ, ಭೋಕ್ತಾ, ಕ್ಷೇತ್ರಜ್ಞ, ಶರೀರಿ ಎಂಬುದೆಲ್ಲ ಜೀವಿಯ ಪರ್ಯಾಯ ಹೆಸರುಗಳಾಗಿವೆ. ಭಗವಂತನು ಸರ್ವ ಶಕ್ತನೂ, ಸರ್ವಜ್ಞನೂ ಆಗಿದ್ದು, ಮಾಯಾಶಕ್ತಿಯು ಅವನ ವಿಶೇಷ ಶಕ್ತಿಯಾಗಿದೆ. ಈ ಜಗತ್ತು, ಜೀವಿಗಳು ಅವನ ಸೃಷ್ಟಿಗೆ ಒಳಗಾಗಿರುತ್ತವೆ. ಇದನ್ನೇ ಶ್ರೀಮದ್ಭಗವದ್ಗೀತೆಯಲ್ಲಿ ಹೀಗೆ ವಿವರಿಸ ಲಾಗುತ್ತದೆ:

**ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।**
**ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥**

" ಎಂದಿಗೂ ಚ್ಯುತಿ ಇಲ್ಲದ ಸನಾತನವಾದ ನನ್ನ ಅಂಶವೇ ಸಂಸಾರದಲ್ಲಿ ಜೀವನಾಗಿ ರೂಪುಗೊಂಡು ಜಗತ್ತಿನಲ್ಲಿರುವ (ಪ್ರಕೃತಿ ಯಲ್ಲಿರುವ) ಮನಸ್ಸೆಂಬ ಆರನೆಯ ಇಂದ್ರಿಯವೂ ಸೇರಿದಂತೆ (ಎಲ್ಲ) ಇಂದ್ರಿಯಗಳನ್ನೂ ಸೆಳೆದುಕೊಳ್ಳುತ್ತದೆ."[೩]

### ಜಗತ್ತು

ಜಗತ್ತು ಹಾಗೂ ಜಗದೊಳಗಣ ಚೇತನ ಅಚೇತನ ವಸ್ತುಗಳ ಬಗ್ಗೆ ಹೇಳುವುದಾದರೆ, ಬ್ರಹ್ಮನು ಜಗತ್ತನ್ನು ಸೃಷ್ಟಿಸಿ ಅದರೊಳಗೆ ಅಂತರ್ಯಾಮಿಯಾಗಿ ನೆಲಸಿ ವಿವಿಧರೂಪಗಳನ್ನು ಧರಿಸಿ ಜಗತ್ತಿನ ಒಳಗೆ ಏನೇನಿದೆಯೋ ಅದೆಲ್ಲವೂ ಆದನು ಎಂಬುದಾಗಿ ತೈತ್ತಿರೀಯ ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೀಗೆ ತಿಳಿಸಲಾಗಿದೆ:

" ನಾನು ಬಹುವಾಗಿ ರೂಪುಗೊಳ್ಳುವೆನು ಎಂದು ಬ್ರಹ್ಮನು ಸಂಕಲ್ಪಿಸಿದನು. ಅವನು ತಪಸ್ಸನ್ನು ಮಾಡಿದನು. ಅವನು ತಪಸ್ಸು ಮಾಡಿ ಅನಂತರದಲ್ಲಿ ನಾಮರೂಪಗಳಿಂದ ಕೂಡಿದ ಚರಾಚರ ಜೀವಿ ಹಾಗೂ ವಸ್ತುವಿಶೇಷಗಳನ್ನು ಒಳಗೊಂಡ ಈ ಜಗತ್ತನ್ನು

ಸೃಷ್ಟಿಸಿದನು. ಸೃಷ್ಟಿಸಿದ ಜಗತ್ತಿನ ಒಳಗೆ ಪ್ರವೇಶಿಸಿದನು. ಅದನ್ನು ಪ್ರವೇಶಿಸಿ, ನಾಮರೂಪಗಳುಳ್ಳ ಮೂರ್ತನೂ ನಾಮರೂಪ ಗಳಿಲ್ಲದ ಅಮೂರ್ತನೂ ಆದನು. ಹಾಗೆಯೇ ವಿವಿಧ ರೀತಿಯ ಮತ್ತು ಜಾತಿಯ ಸಮಾನವಲ್ಲದ ಪದಾರ್ಥಗಳಿಂದ ವಿಂಗಡಿಸ ಲ್ಪಟ್ಟನು. ಇದೇ ರೀತಿ, ಇನ್ನು ಕೆಲವು ಪದಾರ್ಥಗಳಿಂದ ವಿಂಗಡಿಸ ಲ್ಪಡದೇ ಅಮೂರ್ತನಾಗಿ ಉಳಿದನು. ಜೀವಿಗಳ ಗೂಡು ಅಥವಾ ಆಶ್ರಯನಾಗಿ, ಆಶ್ರಯ ನೀಡದವನಾಗಿ, ಎಲ್ಲ ಸಂದರ್ಭಗಳಲ್ಲಿ ಏಕಮಾತ್ರ ಪರಮಾತ್ಮನು ವಿವಿಧರೂಪಗಳನ್ನು ತಳೆದೋ, ರೂಪ ತಳೆಯದೆಯೂ ಮೂರ್ತ ಹಾಗೂ ಅಮೂರ್ತನಾಗಿ ವ್ಯಕ್ತ ಗೊಂಡನು. ಸತ್ಯಸ್ವರೂಪದ ಪರಮೇಶ್ವರನೇ ಸತ್ಯ ಮತ್ತು ಅಸತ್ಯ ಎಂಬ ಎಲ್ಲ ರೂಪಗಳಲ್ಲಿಯೂ ವ್ಯಕ್ತಗೊಂಡನು. ಹಾಗೆಯೇ ವಿಜ್ಞಾನ ಮತ್ತು ಅವಿಜ್ಞಾನ ಎಂದರೆ, ಚೇತನ ಹಾಗೂ ಅಚೇತನ ವಸ್ತುಗಳಾಗಿ ವ್ಯಕ್ತಗೊಂಡನು. ದಿವ್ಯ ಜ್ಞಾನಿಗಳು ಹೀಗೆ ವ್ಯಕ್ತಗೊಂಡ ಬ್ರಹ್ಮವು ಸತ್ಯ ಎಂದು ಹೇಳುತ್ತಾರೆ; ಅದಲ್ಲದೆ ಕಾಣಲು, ಹೇಳಲು ಮತ್ತು ತಿಳಿಯಲು ಈ ಜಗತ್ತಿನಲ್ಲಿ ಏನೇನು ವಸ್ತುವಿಚಾರಗಳು ಸಾಧ್ಯವಾಗುತ್ತವೆಯೋ ಅವೆಲ್ಲವೂ ಸತ್ಯಸ್ವರೂಪ ಪರಬ್ರಹ್ಮ ಪರ ಮಾತ್ಮನೇ ಆಗಿದ್ದಾನೆ ಎಂದು ನಿರ್ಣಾಯಕವಾಗಿ ಹೇಳಿರು ತ್ತಾರೆ." [1]

ಅವರ್ಣನೀಯವಾದ ಸೌಂದರ್ಯ, ವಿಸ್ಮಯ, ವಿಶೇಷ ಗಳಿಂದ ಕೂಡಿದ ಈ ಜಗತ್ತು ಹಾಗೂ ಅದರಲ್ಲಿನ ಜೀವರಾಶಿಗಳು ಮತ್ತು ವಸ್ತುವಿಚಾರಗಳ ಸೃಷ್ಟಿ–ಸ್ಥಿತಿ–ಲಯಕಾರಕ ಶಕ್ತಿಯನ್ನು ಭಗವಂತನು ಹೊಂದಿದ್ದಾನೆ. ಅವನ ಈ ಅನುಪಮವೂ ಅಪಾರವೂ ಆದ ಶಕ್ತಿಯನ್ನು 'ಮಾಯೆ' ಎಂದೂ, ಮಾಯಾಶಕ್ತಿ ಯನ್ನು ಹೊಂದಿರುವ ಭಗವಂತನನ್ನು 'ಮಾಯಿನ್' ಎಂದೂ ವಿವರಿಸಲಾಗಿದೆ. ಈ ಸಂಬಂಧವಾಗಿ ಶ್ವೇತಾಶ್ವತರ ಉಪನಿಷತ್ತಿನಲ್ಲಿ ಕಂಡುಬರುವ ಸ್ಮರಣೀಯವಾದ ಶ್ಲೋಕವೊಂದು ಹೀಗಿದೆ:

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ ।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ॥

"ಮಾಯಾಶಕ್ತಿಯಿಂದ ಕೂಡಿರುವ ಜಗತ್ ಪ್ರಕೃತಿಯನ್ನು 'ಮಾಯೆ' ಎಂದೂ, ಮಹೇಶ್ವರನನ್ನು 'ಮಾಯಿನ್' ಎಂದೂ ತಿಳಿಯಬೇಕು. ಈ ದೃಶ್ಯ ಜಗತ್ತು ವಸ್ತುವಿಚಾರಗಳೆಲ್ಲವೂ ಪರಮಾತ್ಮನ ಅವಯವಗಳಿಂದ ವ್ಯಾಪ್ತವಾಗಿದೆ." [2]

### ಆಧ್ಯಾತ್ಮಿಕ ಸಾಧನೆ

ಹಿಂದೂಧರ್ಮದಲ್ಲಿ ದೇವರು–ಜೀವಿ–ಜಗತ್ತು ಇವುಗಳ ಬಗೆಗೆ ವಿಸ್ತಾರವಾದ ವಿವೇಚನೆ ಮಾಡಲಾಗಿದೆ. ಹಾಗೆಯೇ ನಿಶ್ಚಯವಾಗಿ ಈ ಮೂರರ ಸಂಬಂಧ ಹಾಗೂ ಜೀವಿಗಳ ಜೀವನೋದ್ದೇಶವನ್ನು ಸ್ಪಷ್ಟವಾಗಿ ಹೇಳಲಾಗಿದೆ. ಜೀವಿಯ ಅಂತರ್ಯದಲ್ಲಿ ದೈವೀಶಕ್ತಿಯು ಅಡಗಿದೆ. ಆ ಜೀವಲೋಕವಾದ ಜಗತ್ತಿನಲ್ಲಿ ಜೀವಿಯು ತನ್ನ ಅಂತರಂಗದಲ್ಲಿನ ದಿವ್ಯತೆಯ ವಿಕಾಸದ ಮೂಲಕ ಮೋಕ್ಷವನ್ನು ಹೊಂದಲು ಸಾಧ್ಯ ಎಂಬ ವಿಶೇಷವಾದ ಆಶ್ವಾಸನೆಯನ್ನು ಕೂಡ ನೀಡಲಾಗಿದೆ. ಹಾಗೆಯೇ ಮಾನವನು ದೇಹ, ಮನಸ್ಸು, ಬುದ್ಧಿಗಳಲ್ಲಿ ವಿಕಾಸಗೊಂಡು ಪೂರ್ಣಸೌಖ್ಯ–ಪೂರ್ಣಾನಂದವನ್ನು ಹೊಂದಬೇಕೆಂದು ತಿಳಿಸಲಾಗಿದೆ. ಜಗತ್ತಿನಲ್ಲಿ ಜನ್ಮ ತಳೆದ ಜೀವಿಯು ತನ್ನ ಪೂರ್ಣವಿಕಾಸ, ಉನ್ನತಿಯನ್ನು ಸಾಧಿಸ ಬೇಕಾದುದು ಐಚ್ಛಿಕವಲ್ಲ, ಅದು ಅತ್ಯಗತ್ಯ ಎಂದು ಹಿಂದೂ ಧರ್ಮವು ಒತ್ತಿಹೇಳುವುದು. ನಿಜವಾದ ಅರ್ಥದಲ್ಲಿ ಪೂರ್ಣ ವಿಕಾಸ ಎಂದರೆ, ಅಸತ್ಯದಿಂದ ಸತ್ಯದೆಡೆಗೆ, ಕತ್ತಲಿನಿಂದ ಬೆಳಕಿ ನೆಡೆಗೆ, ಮೃತ್ಯುವಿನಿಂದ ಅಮೃತತ್ವಕ್ಕೆ ಏರುವುದೇ ಆಗಿದೆ; ಇದು ಐಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಎಂಬ ಮೂರು ದೃಷ್ಟಿಯಿಂದಲೂ ಆಗಬೇಕಾಗಿದ್ದು, ಹಾಗಾಗುವುದೇ ಪೂರ್ಣ ವಿಕಾಸ–ಸರ್ವಾಂಗೀಣ ಉನ್ನತಿ ಆಗಿರುತ್ತದೆ ಎಂದು ಶಾಸ್ತ್ರ ಗ್ರಂಥಗಳು ವಿವರಿಸುತ್ತವೆ.

ಮಾನವನು ತನ್ನ ಜೀವನದಲ್ಲಿ ಸರ್ವಾಂಗೀಣ ಉನ್ನತಿ ಪಡೆಯಲು, ತನ್ನ ಜೀವನದ ಬೇಕುಬೇಡಗಳನ್ನು ಕ್ರಮಬದ್ಧವಾಗಿ ಪೂರೈಸಿಕೊಳ್ಳಬೇಕು. ಅವನ ಬೇಡಿಕೆಗಳು ಬಯಕೆಗಳು ಅಸಂಖ್ಯಾತವಾಗಿರಬಹುದು. ಆದರೆ ಎಲ್ಲವನ್ನೂ ಈ ಜಗತ್ತಿನಲ್ಲಿ ಪಡೆಯಲು ಸಾಧ್ಯವೂ ಇಲ್ಲ, ಪಡೆಯುವುದು ಜೀವನ ಸೌಖ್ಯ ಪೂರ್ತಿಗೆ ಸಹಕಾರಿಯೂ ಅಲ್ಲ. ಮಾನವನು ಈ ಭೂಮಿಯಲ್ಲಿ ತನ್ನ ಜೀವಿತದ ಅವಧಿಯಲ್ಲಿ ಒಟ್ಟಿನಲ್ಲಿ ಸಾಧಿಸಬೇಕಾದುದನ್ನು ಧರ್ಮ, ಅರ್ಥ, ಕಾಮ, ಮೋಕ್ಷ ಎಂದು ನಾಲ್ಕು ವಿಧವಾಗಿ ವಿಂಗಡಿಸಿ, ಅದನ್ನು ಚತುರ್ವಿಧ ಪುರುಷಾರ್ಥಗಳು ಎಂದು ಹಿಂದೂಧರ್ಮದಲ್ಲಿ ಹೆಸರಿಸಲಾಗಿದೆ. ಜೀವಿಯ ಜೀವನದ ಮಹೋನ್ನತವಾದ ಸಾಧನೆಯೇ ಮೋಕ್ಷಪ್ರಾಪ್ತಿ. ಅದು ಪರಮ ಶ್ರೇಷ್ಠವಾದುದು, ಆದುದರಿಂದ ಅದನ್ನು ಪರಮಪುರುಷಾರ್ಥ, ಆತ್ಮದರ್ಶನ, ಭಗವಂತನ ಸಾಕ್ಷಾತ್ಕಾರ, ಪರಮಾನಂದ ಪ್ರಾಪ್ತಿ ಎಂದು ಸಂಗ್ರಹವಾಗಿ ಹೇಳಬಹುದು. ಜೀವಿಯು ಇಂದ್ರಿಯಗಳ ದುಷ್ಪ್ರಭಾವಕ್ಕೆ ಸಿಲುಕದಂತಾಗಿ. ಸುಖದುಃಖಗಳ, ಕಷ್ಟನಷ್ಟಗಳ, ಜನ್ಮಮೃತ್ಯುಗಳ ಸಂಸಾರಚಕ್ರದಿಂದ ಬಿಡುಗಡೆ ಹೊಂದುವುದೇ ಮೋಕ್ಷ. ಭಗವಂತನ ಸಾಕ್ಷಾತ್ಕಾರವನ್ನು ಪರಮ ಪದಪ್ರಾಪ್ತಿ ಎನ್ನಲಾಗಿದ್ದು ಅದನ್ನು ಆಧ್ಯಾತ್ಮಿಕ ಸಾಧನೆಯಿಂದ ಪಡೆಯಲು ಸಾಧ್ಯ ಎಂದು ಹೇಳಲಾಗಿದೆ. ಕಷ್ಟ, ದುಃಖ, ಅಶಾಶ್ವತ ಸುಖ, ಮೃತ್ಯು– ಇವುಗಳಿಂದ ಕೂಡಿದ ಸಂಸಾರ ಚಕ್ರದಿಂದ ಬಿಡುಗಡೆ ಹೊಂದಲು ಭಗವಂತನ ಸಾಕ್ಷಾತ್ಕಾರವೊಂದೇ ದಾರಿ ಎಂದು ವೈದಿಕ ಮಹರ್ಷಿಗಳ ವಾಣಿ ಘೋಷಿಸುತ್ತದೆ. ಈ ಸಂಬಂಧ ವಾಗಿ ಶ್ವೇತಾಶ್ವತರ ಉಪನಿಷತ್ತಿನ ಮನನೀಯವಾದ ಮಂತ್ರವೊಂದು ಹೀಗಿದೆ:

ವೇದಾಹಮೇತಂ ಪುರುಷಂ ಮಹಾಂತ–
ಮಾದಿತ್ಯವರ್ಣಂ ತಮಸಃ ಪರಸ್ತಾತ್
ತಮೇವ ವಿದಿತ್ವಾಽತಿ ಮೃತ್ಯುಮೇತಿ
ನಾನ್ಯಃ ಪಂಥಾ ವಿದ್ಯತೇಽಯನಾಯ

"ಅಜ್ಞಾನವೆಂಬ ಕತ್ತಲಿಗಿಂತ ಆಚೆ ಇರುವ ಸೂರ್ಯ ಸದೃಶನಾದ ಸ್ವಯಂಪ್ರಕಾಶನಾಗಿರುವ ಪರಮೇಶ್ವರನನ್ನು ನಾನು ತಿಳಿದಿರುತ್ತೇನೆ. ಅವನನ್ನು ಅರಿತುಕೊಂಡರೆ ಮಾತ್ರ ಮನುಷ್ಯನು ಮೃತ್ಯುಸಾಗರವನ್ನು (ಸಂಸಾರಚಕ್ರವನ್ನು) ದಾಟುತ್ತಾನೆ.

ಪರಮಪದವನ್ನು ಹೊಂದಲು, ಪರಮಾತ್ಮನನ್ನು ಅರಿಯುವುದು ಎಂಬ ಈ ಮಾರ್ಗಕ್ಕಿಂತ ಬೇರೆ ಮಾರ್ಗವಿಲ್ಲ."[೬]

ಜಗತ್ತಿನಲ್ಲಿ ಜೀವಿಸುತ್ತಲೇ ಜೀವಿಯು ಭಗವಂತನ ಸಾಕ್ಷಾತ್ಕಾರವನ್ನು ಆಧ್ಯಾತ್ಮಿಕ ಸಾಧನೆಯ ಮೂಲಕ ಪಡೆಯಬಹುದು. ಅದೇ **ಜೀವನ್ಮುಕ್ತಿ**. ಮುಂದೆ ಅದೇ ಜೀವವು ದೇಹತ್ಯಾಗ ಮಾಡಿ, ಭಗವತ್ಕೃಪೆಯಿಂದ ಪಡೆಯುವ ಮುಕ್ತಿಯೇ **ವಿದೇಹಮುಕ್ತಿ**.

ಮಾನವನ ಆತ್ಮಶಕ್ತಿಯ ಪೂರ್ಣವಿಕಾಸಕ್ಕೆ ಇರುವ ಸಾಧನಾ ಮಾರ್ಗವನ್ನು ಯೋಗಸಾಧನೆ ಅಥವಾ ಆಧ್ಯಾತ್ಮಿಕ ಸಾಧನೆ ಎಂದು ಹಿಂದೂಧರ್ಮದಲ್ಲಿ ಕರೆಯಲಾಗಿದೆ. ಯೋಗ ಎಂದರೆ, 'ಕೂಡಿಸುವುದು' ಎಂದರ್ಥ. ಮಾನವನನ್ನು ಮಾಧವನೊಡನೆ, ನರನನ್ನು ನಾರಾಯಣನೊಡನೆ, ಆತ್ಮವನ್ನು ಪರಮಾತ್ಮನೊಡನೆ ಒಂದುಗೂಡಿಸುವ ಸಾಧನಾಮಾರ್ಗವೇ ಯೋಗ. ಮನುಷ್ಯನ ಸ್ವಭಾವ, ಜೀವನಸಂಸ್ಕಾರ ಹಾಗೂ ದೃಷ್ಟಿ, ಬುದ್ಧಿಯ ಪರಿಪಕ್ವತೆ – ಇವುಗಳ ಆಧಾರದ ಮೇಲೆ ಯೋಗವು ಬೇರೆ ಬೇರೆ ವ್ಯಕ್ತಿಗಳ ಸಾಧನಾವಿಧಾನದಲ್ಲಿ ಬೇರೆ ಬೇರೆಯಾಗಿ ಕಂಡುಬರುತ್ತದೆ. ಸಾಮಾನ್ಯವಾಗಿ ಮನುಷ್ಯರನ್ನು ಅವರವರ ಸ್ವಭಾವ, ಗುಣಧರ್ಮಗಳಿಗೆ ಅನುಸಾರವಾಗಿ ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು. ೧. ಕ್ರಿಯಾಶೀಲರು, ೨. ಪ್ರೀತಿಭಾವನಾ ದೃಷ್ಟಿಯುಳ್ಳವರು ೩. ಅಂತರಂಗ ಧ್ಯಾನಾಸಕ್ತರು ೪. ವಿಚಾರವಿಮರ್ಶೆಯ ದೃಷ್ಟಿಯುಳ್ಳವರು.

ಬದುಕಿನಲ್ಲಿ ಜೀವಿಯು ತಾನು ಮಾಡುವ ಕಾರ್ಯಗಳು ತನಗೆ ಬಂಧನ ಎಂದಾಗದೆ, ಅದೇ ಕೆಲಸಗಳು ಆತ್ಮಸಾಕ್ಷಾತ್ಕಾರಕ್ಕೆ, ಮುಕ್ತಿಗೆ ಸಾಧನವಾಗುವಂತೆ ನೋಡಿಕೊಳ್ಳುವುದೇ ಕರ್ಮಯೋಗ. ಜೀವನದ ಕರ್ತವ್ಯಗಳು, ದೈನಂದಿನ ಕಾರ್ಯಕಲಾಪಗಳು, ಸಂಸಾರದ ಜವಾಬ್ದಾರಿಗಳು – ಇವುಗಳನ್ನು ಅಲಕ್ಷಿಸದೆ ದೃಢತೆ ಮತ್ತು ಅಧ್ಯಾತ್ಮ ಸಾಧನೆಯ ದೃಷ್ಟಿಯಿಂದ ಕಾರ್ಯನಿಷ್ಠೆಯಿಂದ ದುಡಿಯುವುದು ಕರ್ಮಯೋಗದ ತತ್ತ್ವಸಾರವಾಗಿರುತ್ತದೆ. ಜೀವನದಲ್ಲಿ ಮಾನವನು ತನ್ನ ಸ್ವಧರ್ಮ ಮತ್ತು ಸ್ವಕರ್ಮಗಳಿಗೆ ಅನುಸಾರವಾಗಿ ಎಲ್ಲ ಕೆಲಸಗಳನ್ನು ಕರ್ಮಕುಶಲತೆಯಿಂದ, ಈಶ್ವರಾರ್ಪಣ ಭಾವದಿಂದ ಮಾಡುತ್ತಾ ಸಾಗಬೇಕು ಎನ್ನುವುದು ಕರ್ಮಯೋಗದ ಅನುಷ್ಠಾನಸೂತ್ರವಾಗಿದೆ. ಭಗವದ್ಗೀತೆಯು ಕರ್ಮಯೋಗದ ಕೈಪಿಡಿಯಾಗಿರುತ್ತದೆ.

ಭಕ್ತಿ ಎಂದರೆ ಪ್ರೀತಿ, ಸೇವೆ ಎಂದರ್ಥ. ಭಗವಂತನನ್ನು ಏಕನಿಷ್ಠೆಯಿಂದ ಪ್ರೀತಿಸುತ್ತಾ ಜೀವನದ ಸಕಲ ಕಾರ್ಯಗಳನ್ನೂ ದೇವರ ಪ್ರೀತ್ಯರ್ಥವಾದ ಕೆಲಸ ಎಂದು ನಡೆಸಿಕೊಂಡು ಪ್ರೀತಿಯ ಮೂಲಕವೇ ಭಗವಂತನನ್ನು ಕಾಣಲು ಇರುವ ಮಾರ್ಗವೇ ಭಕ್ತಿಯೋಗ. ಭಕ್ತಿಯೋಗವು ಭಗವತ್ಸಾಕ್ಷಾತ್ಕಾರಕ್ಕೆ ಸುಲಭ, ಸುಗಮ ಹಾಗೂ ಸರಳವಾದ ಯೋಗಮಾರ್ಗ ಎಂದು ಸರ್ವತ್ರ ಪ್ರಸಿದ್ಧವಾಗಿರುತ್ತದೆ. ಭಕ್ತಿಯೋಗದಲ್ಲಿ ದೇವರ ವಿಚಾರವಾಗಿ, ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ ಎಂಬ ಒಂಭತ್ತು ವಿಧದ ಸಾಧನಾ ವಿಚಾರಗಳನ್ನು ಮುಖ್ಯವಾಗಿ ಹೇಳಲಾಗಿದ್ದು, ಅವುಗಳನ್ನು ಒಟ್ಟಾಗಿ ನವವಿಧ ಭಕ್ತಿ – ಎಂಬುದಾಗಿ ಹೇಳಲಾಗುತ್ತದೆ. ಶ್ರೀಮದ್ ಭಾಗವತದಲ್ಲಿ ಈ ಬಗ್ಗೆ ಆಮೂಲಾಗ್ರವಾದ ವಿವರಣೆಗಳಿದ್ದು, ಅದು ಭಕ್ತಿಶಾಸ್ತ್ರದ ಗ್ರಂಥರತ್ನವೆಂದು ಪ್ರಖ್ಯಾತವಾಗಿದೆ.

ಜೀವಿಯ ಮನಸ್ಸನ್ನು ಏಕಾಗ್ರಗೊಳಿಸಿ, ಧ್ಯಾನಕ್ರಮದ ಮೂಲಕ ಪರಮಾತ್ಮನಲ್ಲಿ ಒಂದಾಗುವುದಕ್ಕೆ ನೆರವಾಗುವ ಯೋಗ ಸಾಧನೆಯೇ ರಾಜಯೋಗ. ರಾಜಯೋಗದ ಸಾಧಕನು ದೇವರನ್ನು ನಂಬಿ, ದೇವರಲ್ಲಿ ಶರಣಾಗಿ ತನ್ನ ಸಾಧನೆಯನ್ನು ಮಾಡುತ್ತಾನೆ. ಇಷ್ಟದೇವತೆ, ಮಂತ್ರಜಪ, ಸ್ವಾಧ್ಯಾಯ, ಧ್ಯಾನ ಮುಂತಾದ ವಿಚಾರಗಳು ರಾಜಯೋಗದಲ್ಲಿ ಅಡಕವಾಗಿರುವ ಸಾಧನಾಂಶಗಳಾಗಿವೆ. ರಾಜಯೋಗವು ಜೀವಾತ್ಮನನ್ನು ಜಗತ್ತಿನ ಸಂಸಾರಚಕ್ರದಿಂದ ವಿಮುಕ್ತಗೊಳಿಸಿ, ಪರಮಾನಂದ ಸ್ವರೂಪಿಯಾದ ಭಗವಂತನಲ್ಲಿ ಐಕ್ಯಗೊಳಿಸುವ ವಿಶಿಷ್ಟ ಸಾಧನಾ ವಿವರಗಳಿಂದ ಕೂಡಿ, ವಿಖ್ಯಾತವಾಗಿರುವ ಯೋಗಮಾರ್ಗವಾಗಿರುತ್ತದೆ. ಮಹರ್ಷಿ ಪತಂಜಲಿಪ್ರಣೀತವಾದ 'ಯೋಗಸೂತ್ರಗಳು' ಎಂಬ ಗ್ರಂಥವು ರಾಜಯೋಗವನ್ನು ಕುರಿತ ಆಧಾರಗ್ರಂಥವಾಗಿದೆ.

ಜ್ಞಾನಯೋಗ ಎಂದರೆ ಆತ್ಮವಿಚಾರ, ನಿತ್ಯಾನಿತ್ಯ ವಸ್ತುವಿವೇಕ ಹಾಗೂ ವೈರಾಗ್ಯದ ಹಿನ್ನೆಲೆಯೊಡನೆ ಸಾಧನೆ ಮಾಡಿ, ಸಕಲ ಚರಾಚರ ಜೀವಿಗಳು ಹಾಗೂ ವಸ್ತುವಿಶೇಷಗಳು ಸೇರಿದಂತೆ, ಸರ್ವತ್ರ ಪರಮಾತ್ಮನ ದಿವ್ಯ ಅಸ್ತಿತ್ವದ ಅನುಭವ ಹೊಂದಿ, ಆತ್ಮಾನಂದಸಂಪನ್ನನಾಗಲು ಮಾನವನಿಗೆ ನೆರವಾಗುವ ಸಾಧನೆಯ ಹಾದಿ. ಜ್ಞಾನಯೋಗದಿಂದ ಆಧಿಭೌತಿಕ ತಿಳುವಳಿಕೆಯೂ ಆಧ್ಯಾತ್ಮಿಕ ಸಾಕ್ಷಾತ್ಕಾರವೂ ಲಭಿಸುತ್ತದೆ. ಜ್ಞಾನಯೋಗ ಸಾಧಕನು ವಿಚಾರಪಥದಲ್ಲಿ ತನ್ನ ಶ್ರದ್ಧೆ, ಮನೋದಾರ್ಢ್ಯತೆ ಇತ್ಯಾದಿ ಜ್ಞಾನಯೋಗಸಾಧನಾ ತತ್ತ್ವಗಳನ್ನು ಬಳಸಿ, ಸಾಧನೆ ಮಾಡುತ್ತ, ಜ್ಞಾನಯೋಗಿಯಾಗಿ ಅರಳಿ, ಬ್ರಹ್ಮಸಾಕ್ಷಾತ್ಕಾರದ ಆನಂದವನ್ನು ಅನುಭವಿಸುತ್ತಾನೆ. ಜ್ಞಾನಯೋಗದ ಆಧಾರ ಗ್ರಂಥವಾದ ಬ್ರಹ್ಮಸೂತ್ರಗಳನ್ನು ಶ್ರೀವೇದವ್ಯಾಸ ಮಹರ್ಷಿಗಳು ರಚಿಸಿರುತ್ತಾರೆ.

ಹೀಗೆ ದೇವರು–ಜೀವ–ಜಗತ್ತು ಮತ್ತು ಅಧ್ಯಾತ್ಮ ಸಾಧನೆಯ ಕುರಿತಾಗಿ ಹಿಂದೂಧರ್ಮದಲ್ಲಿ ಸರ್ವಕಾಲಕ್ಕೂ, ಸರ್ವತ್ರ ಪ್ರಯೋಗ ಸಾಧ್ಯವಾದ ತತ್ತ್ವ ಹಾಗೂ ಅನುಷ್ಠಾನ ವಿವರಗಳನ್ನು 'ದೇವನೊಬ್ಬ ನಾಮ ಹಲವು, ಹಾಗೆಯೇ ಆತನನ್ನು ಸೇರಲು ಮಾರ್ಗಗಳು ಹಲವು' ಎಂದು ಸ್ಪಷ್ಟಪಡಿಸಲಾಗಿದೆ. ಹೀಗಾಗಿ ಇಂದಿಗೂ ಹಿಂದೂ ಧರ್ಮವು ಪ್ರಸ್ತುತವಾಗಿದ್ದು, ಸತ್ವಶಾಲಿಯಾಗಿ ಬೆಳಗುತ್ತಿದೆ.

**ಆಕರಗಳು:**

೧. ತೈತ್ತಿರೀಯೋಪನಿಷತ್, ೩:೧
೨. ಶ್ವೇತಾಶ್ವತರ ಉಪನಿಷತ್ ೬:೧೧
೩. ಭಗವದ್ಗೀತೆ, ೧೫:೭
೪. ತೈತ್ತಿರೀಯೋಪನಿಷತ್.೨:೬
೫. ಶ್ವೇತಾಶ್ವತರ ಉಪನಿಷತ್ ೪:೧೦
೬. ಶ್ವೇತಾಶ್ವತರ ಉಪನಿಷತ್ ೩:೮

(ಮುಂದಿನ ತಿಂಗಳು: ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಅಭಿಪ್ರಾಯಗಳು)